ಸಿನಿಮಾ ನೆನಪಿಸಿಕೊಳ್ಳಿ. ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದ ಈ ಸಿನಿಮಾ, ಕ್ಯಾನ್ಸರ್‌ಪೀಡಿತ ಪತ್ನಿಯನ್ನು ಉಳಿಸಿಕೊಳ್ಳಲು ಕಥಾನಾಯಕ ಎತ್ತುವ 'ಅವತಾರ'ಗಳ ಕಥೆ. ನಾಯಕನ ಪಡಿಪಾಟಲುಗಳು ನೋಡುಗರನ್ನು ರಂಜಿಸುತ್ತವೆ. ಆದರೆ, ಈ ರಂಜನೆಯಾಚೆಗೆ ದಾಂಪತ್ಯದ ಚೆಲುವು ಮತ್ತು ಸಾರ್ಥಕತೆಯ ಕುರಿತು ಸಿನಿಮಾ ಮಾತನಾಡುತ್ತದೆ. ಗಂಡನೊಬ್ಬ ತನ್ನ ಪತ್ನಿಯ ಬಗ್ಗೆ ಹೊಂದಿರುವ ಪ್ರೇಮದ ಪರಾಕಾಷ್ಠೆಯಂತೆ 'ಹಾಲುಜೇನು' ಮುಖ್ಯವೆನ್ನಿಸುತ್ತದೆ. ಬಳಲಿದ ಹೆಂಡತಿಯನ್ನು ಕೂರಿಸಿ ಉಪಚರಿಸುವ, 'ಈ ದಿನವಾದರೂ ನಿನ್ನ ಸೇವೆಯ ಮಾಡುವೆ ಚಿನ್ನ' ಎಂದು ಹಾಡುವ ನಾಯಕ ಯಾವ ಹೆಣ್ಣಾದರೂ ಹಂಬಲಿಸುವಂತಹ ಗಂಡು.

ದೊರೈ–ಭಗವಾನ್ ನಿರ್ದೇಶನದ 'ಜೀವನಚೈತ್ರ' ಮದ್ಯಪಾನದ ವಿರುದ್ಧ ಸೊಲ್ಲೆತ್ತುವ ಪ್ರಯತ್ನವಾಗಿ ಗುರ್ತಿಸಿಕೊಂಡಿದ್ದರೂ, ಮಾತೃವಾತ್ಸಲ್ಯ ಹಾಗೂ ಅವಿಭಕ್ತ ಕುಟುಂಬದ ಚೆಲುವು ಕೂಡ ಚಿತ್ರಕಥೆಯ ಪ್ರಮುಖ ಕಾಳಜಿಗಳಾಗಿವೆ. ತಾಯಿ–ಮಗನ ಅನುಬಂಧವನ್ನು ಮನಮುಟ್ಟುವಂತೆ ಹೇಳುವ 'ಜೀವನಚೈತ್ರ' ಸಿನಿಮಾದಲ್ಲಿ ಕುಟುಂಬದ ಒಡಕಿಗೂ ಊರಿನ ಕೆಡುಕಿಗೂ ಸಂಬಂಧವಿರುವ ಸೂಚನೆಯೂ ಇದೆ. 'ಜೀವನಚೈತ್ರ' ಮಾತ್ರವಲ್ಲ – ರಾಜ್‌ರ ಅನೇಕ ಚಿತ್ರಗಳು ಕರುಳಿನ ಕಥನಗಳಾಗಿವೆ. 'ಅನುರಾಗ ಅರಳಿತು' ಚಿತ್ರದ ನಾಯಕ ಅಮ್ಮನ ಆರೋಗ್ಯಕ್ಕಾಗಿ 'ಶ್ರೀಕಂಠ ವಿಷಕಂಠ' ಎಂದು ಉರುಳುಸೇವೆ ಮಾಡುವುದು ಹಾಗೂ 'ಅಮ್ಮ ನೀನು ನಮಗಾಗಿ, ಸಾವಿರ ವರ್ಷ ಸುಖವಾಗಿ, ಬಾಳಲೆ ಬೇಕು ಈ ಮನೆ ಬೆಳಕಾಗಿ' ಎಂದು 'ಕೆರಳಿದ ಸಿಂಹ'ದ ಸಹೋದರರು ಹಾಡುವುದನ್ನು ಚಿತ್ರರಸಿಕರು ಮರೆಯುವುದುಂಟೆ? 'ಬಂಗಾರದ ಮನುಷ್ಯ', 'ಗುರಿ' ಚಿತ್ರಗಳ ಸೋದರ, 'ಚಲಿಸುವ ಮೋಡಗಳು' ಸಿನಿಮಾದ ಗೆಳೆಯನ ಪಾತ್ರಗಳೂ ನೋಡಿದಾಗಲೆಲ್ಲ ಮನಸ್ಸಿನಲ್ಲಿ ಕಂಪನಗಳನ್ನೆಬ್ಬಿಸುವಷ್ಟು ಆರ್ದ್ರವಾಗಿವೆ.

ಕೌಟುಂಬಿಕ ಸಂಬಂಧಗಳು ಮಾತ್ರವಲ್ಲ, ಸಮಾಜದ ಹಲವು ಮುಖಗಳನ್ನು ಪ್ರತಿನಿಧಿಸುವಲ್ಲೂ ರಾಜ್‌ಗೆ ಸರಿಸಾಟಿಯಿಲ್ಲ. ಕಮ್ಮಾರ, ಕುಂಬಾರ, ಕಬೀರ, ಕುರಿಗಾಹಿ, ಗೊಲ್ಲ, ರೈತ – ರಾಜ್ ಮಾಡದೆ ಉಳಿದ ಪಾತ್ರವಾದರೂ ಯಾವುದು? ಈ ಪಾತ್ರಗಳ ಮೂಲಕ ಆಯಾ ಸಮುದಾಯಗಳ ಸ್ವಾಭಿಮಾನವನ್ನು ರಾಜ್ ಹೆಚ್ಚಿಸಿದ್ದಾರೆ, ಆ ಸಮುದಾಯ ತಮ್ಮ ಬಗ್ಗೆ ಹೆಮ್ಮೆಪಡುವಂತೆ ಮಾಡಿದ್ದಾರೆ. 'ಅಲ್ಲಾ ಅಲ್ಲಾ' ಎಂದು ಹಾಡುವ ಮೂಲಕ ಮುಸ್ಲಿಂ ಸಮುದಾಯವೂ 'ಇವ ನಮ್ಮವ' ಎನ್ನುವಂತಾದರು. ಕಣ್ಣಪ್ಪ, ಕನಕ, ಪುರಂದರ, ಸರ್ವಜ್ಞ, ತುಕಾರಾಂ, ರಾವಣ, ಹಿರಣ್ಯಕಶಿಪು, ಕೃಷ್ಣ, ಹರಿಶ್ಚಂದ್ರ, ಮಯೂರ, ಪುಲಿಕೇಶಿ, ಕಂಠೀರವ, ಕೃಷ್ಣದೇವರಾಯ, ಮುಂತಾದ ಸಾಂಸ್ಕೃತಿಕ–ಚಾರಿತ್ರಿಕ ಸ್ಮೃತಿಗಳನ್ನು ಹಲವು ತಲೆಮಾರುಗಳಿಗೆ ಮುಟ್ಟಿಸಿದ ಕೀರ್ತಿಯೂ ರಾಜ್ ಅವರಿಗೆ ಸಲ್ಲಬೇಕು.



**ರಾಜ್‌ಕುಮಾರ್ ಬೋಧಿಸಲಿಲ್ಲ, ಜಾತೀಯತೆಯನ್ನು ಪಾಲಿಸಲಿಲ್ಲ. ಅವರು ಬದುಕಿದ್ದು ಹಾಗೂ ತಮ್ಮ ಸಿನಿಮಾಗಳ ಮೂಲಕ ಅಭಿವ್ಯಕ್ತಿಸಿದ್ದು ಮನುಷ್ಯಧರ್ಮವನ್ನು, ಬದುಕಿಗೆ ಅಗತ್ಯವಾದ ನೈತಿಕತೆ ಮತ್ತು ಸರಳತೆಯನ್ನು.**

ತಲೆಮಾರುಗಳಿಂದ ತಲೆಮಾರಿಗೆ ರಾಜ್ ಬಿಂಬ

ಸಿನಿಮಾಗಳನ್ನು ಕನಸುಗಳ ಮಾರಾಟದ ವಾಹಕಗಳಂತೆ ನೋಡುವ ಕ್ರಮವಿದೆ. ಆ ಕನಸುಗಳಾದರೂ ಎಂತಹವು? ನಾಯಕ ಅಸಹಾಯಶೂರ, ಒಬ್ಬಂಟಿಯಾಗಿ ನೂರಾರು ಮಂದಿಯನ್ನು ಹೊಡೆದುರುಳಿಸಬಲ್ಲ. ನಾಯಕ–ನಾಯಕಿಯರಂತೂ ಗಿಡಮರಬಳ್ಳಿಗಳಿಗೂ ತಮ್ಮ ಪ್ರೇಮದ ಉನ್ಮತ್ತತೆಯನ್ನು ಸೋಂಕಿಸಬಲ್ಲ ಚದುರರು. ಇಂಥ ಅದ್ಭುತ–ರಮ್ಯ ಕಥನಗಳಲ್ಲಿ ರಾಜ್‌ಕುಮಾರ್ ಕೂಡ ನಟಿಸಿದ್ದಾರೆ. ಆದರೆ, ಜನಸಾಮಾನ್ಯರ ಬದುಕಿನ ಭಾಗವೇ ಆದ ಬಡತನ, ಹಸಿವು, ಸ್ವಾಭಿಮಾನ, ಅವಮಾನಗಳ ಕಥನಗಳಿಗೂ ಜೀವತುಂಬಿದ್ದಾರೆ. ಸಾಮಾನ್ಯವಾಗಿ, 'ರಾಜಕುಮಾರ' ಎಂದರೆ ಜನಸಾಮಾನ್ಯರ ಪಾಲಿಗೆ ಅರಮನೆಯೆನ್ನುವ ದಂತಗೋಪುರದಲ್ಲಿನ ಸುಂದರಬಿಂಬ. ಆದರೆ, ಈ ರಾಜ್‌ಕುಮಾರ ಜನಸಾಮಾನ್ಯರ ಬದುಕಿನ ಬಿಂಬವೇ ಆದುದು ಚಿತ್ರೋದ್ಯಮದಲ್ಲೂ ಸಂಭವಿಸಿರುವ ಪವಾಡ.

ಈ ತಲೆಮಾರಿಗೆ ಕೂಡ ರಾಜ್ ಸಿನಿಮಾಗಳಲ್ಲಿ ಜೀವನದ ಪಾಠಗಳಿವೆ. ಅಮ್ಮನನ್ನು ನೋಡಿಕೊಳ್ಳುವುದು ಹೇಗೆ? ಸಂಗಾತಿಯನ್ನು ಪ್ರೇಮಿಸುವುದು ಹೇಗೆ? ಊರಿಗೆ ಉಪಕಾರಿಯಾಗಿ ಬದುಕುವುದು ಹೇಗೆ? ಜೀವನದಲ್ಲಿ ಯಾವುದು ಮುಖ್ಯ? – ಇಂಥವನ್ನೆಲ್ಲ ರಾಜ್ ಸಿನಿಮಾಗಳಂತೆ ರಸವತ್ತಾಗಿ ಹಾಗೂ ಮನಸ್ಸು ಮುಟ್ಟುವಂತೆ ಹೇಳುವ ಸಶಕ್ತ ಕೃತಿಗಳನ್ನು ಯಾವ ಮಾಧ್ಯಮದಲ್ಲಾದರೂ ಕಾಣುವುದು ಕಷ್ಟ.

ಸಮಕಾಲೀನ ಸಂದರ್ಭ ನೋಡಿ. ಸಮಾಜದ ಎಲ್ಲ ವರ್ಗಗಳು ತಮ್ಮೊಂದಿಗೆ ಸಮೀಕರಿಸಿಕೊಳ್ಳಬಹುದಾದ ಅನುಕರಣೀಯ ವ್ಯಕ್ತಿಗಳೇ ಸಮಾಜದಲ್ಲಿಲ್ಲ. 'ಅಚ್ಛೇ ದಿನ'ದ ವ್ಯಾಪಾರಿಗಳ ವೇಷದ ನಾಯಕರ ಪಾಲಿಗೆ ಹಸಿವು, ಬಡತನ, ಅವಮಾನಗಳೆಲ್ಲ ಕ್ಲೀಷೆಗಳಾಗಿ ಕಾಣಿಸುತ್ತಿವೆ. ದೇಶಪ್ರೇಮ–ಧರ್ಮದ ಹುಸಿ ಭಾವುಕತೆಯಲ್ಲಿ ಈ ನೆಲದ ಬಹುತ್ವದ ಚಹರೆಗಳು ಮಸುಕಾಗುತ್ತ, ಇವತ್ತಿನ ಸಮಾಜ ಒಡಕಲು ಬಿಂಬಗಳ ಕೊಲಾಜ್‌ನಂತೆ ಕಾಣಿಸುತ್ತಿದೆ. ಇಂಥ ಸಂದರ್ಭದಲ್ಲಿ ರಾಜ್‌ರಂತಹ ನೆಲದ ಸ್ಮೃತಿಗಳು ನಮ್ಮ ವಿವೇಕವನ್ನು ಕಾಪಾಡುವ ಹಾಗೂ ಮುನ್ನಡೆಸುವ ಶಕ್ತಿಗಳಾಗಬೇಕು.

ರಾಜ್‌ಕುಮಾರ್ ಬೋಧಿಸಲಿಲ್ಲ, ಜಾತೀಯತೆಯನ್ನು ಪಾಲಿಸಲಿಲ್ಲ. ಅವರು ಬದುಕಿದ್ದು ಹಾಗೂ ತಮ್ಮ ಸಿನಿಮಾಗಳ ಮೂಲಕ ಅಭಿವ್ಯಕ್ತಿಸಿದ್ದು ಮನುಷ್ಯಧರ್ಮವನ್ನು, ಬದುಕಿಗೆ ಅಗತ್ಯವಾದ ನೈತಿಕತೆ ಮತ್ತು ಸರಳತೆಯನ್ನು. ಮಾನವೀಯತೆ ಹಾಗೂ ನೈತಿಕತೆ ಎರಡೂ ದುಬಾರಿಯಾಗಿರುವ ಸಂದರ್ಭದಲ್ಲಿ, ಸರಳತೆ ಬಡವರ ಪಾಲಿನ ಅನಿವಾರ್ಯ ಕರ್ಮವಾಗಿದೆ. ಸಂಕಟಗಳೇ ಸುತ್ತುವರಿದಿರುವ ವರ್ತಮಾನದಲ್ಲಿ, ಮಾನವೀಯತೆ–ನೈತಿಕತೆಯನ್ನು ನವೀಕರಿಸಿಕೊಳ್ಳಬಹುದಾದ ಪ್ರೇರಣೆಪಠ್ಯಗಳಾಗಿ ರಾಜ್ ಸಿನಿಮಾಗಳು ನಮ್ಮ ಜೊತೆಗಿವೆ.